# MANGALORE UNIVERSITY
## CENTRE FOR DISTANCE EDUCATION

***For the attention of students writing assignments in English***

No:MU/CDE/24/2018-19/D1 Date : 10.01.2022
To
1. The students of III B.A./III B.Com./III B.B.A. for the year 2021 -22

Sir/Madam,

**Sub: Submission of two assignments in each subject/paper.- reg.**

As was done in the previous year, this year too you are required to submit two assignments in a subject/paper which you are studying

I am enclosing herewith the list of topics for assignments pertaining to your course. You are required to answer two assignments in a subject / paper which carry 10 marks each.

**Make sure that your assignment**

(a) is logical.

(b) is written in simple and correct English.

(c) is written neatly and clearly.

Please remember that it is compulsory to submit your assignments before the Annual Examinations. Also remember to keep the copies of your assignments with you.

**Instructions:**

1 Submission of two assignments in each subject / paper is compulsory.

2 20 marks for Assignments and 80 marks for annual examinations are allotted.

3. The students shall submit their assignments in the present Academic Year itself irrespective of they appear for Annual Examinations or not.

4 There is no scope for improving Assignment marks after obtaining minimum marks. The same marks will be retained in case the student appears for the subsequent examinations.

5 The students who are not submitting the Assignments may appear for the examinations. However their marks cards will give necessary indications.

6 For writing the assignments, white sheet papers shall be used and separate new sheet shall be used for each assignment in each subject/paper.

7. The students shall write the assignments in their own handwriting, using blue ink pen and shall write in only one side of the paper.

8. The students shall fill in the enclosed format with relevant details and attach the format for each paper separately.

9 The students shall submit all the assignments during the period from **01.06.2022(Wednesday ) to 15.07.2022 (Friday). Thereafter the students, may submit the assignments till 30.07.2022 (Saturday) with a penalty of R.300-00 per day. However, the assignments received after 01.08.2022 will not be considered under any circumstances.**

10 The assignments shall be submitted to **The Director, Centre for Distance Education, Shopping Complex, Mangalagangothri - 574 199.**

Yours faithfully,

DIRECTOR

**Please Note**: You are required to refer books in the subjects concerned recommended by the Teachers while writing assignments.

# ಮಂಗಳೂರು ವಿಶ್ವವಿದ್ಯಾನಿಲಯ
## ದೂರ ಶಿಕ್ಷಣ ಕೇಂದ್ರ

**ಕನ್ನಡದಲ್ಲಿ ಉತ್ತರಿಸುವ ವಿದ್ಯಾರ್ಥಿಗಳ ಗಮನಕ್ಕಾಗಿ,**

**ಸಂಖ್ಯೆ:ಮವಿ/ದೂಶಿಕೆ/24/2021-22/ಡಿ1** ದಿನಾಂಕ : 10.01.2022

ಇವರಿಗೆ,

2021 -22 ನೇ ಸಾಲಿನ ಅಂತಿಮ ಬಿ.ಎ./ಅಂತಿಮ ಬಿ.ಕಾಂ./ಅಂತಿಮ ಬಿ.ಬಿ.ಎ. ವಿದ್ಯಾರ್ಥಿಗಳು.

ಮಾನ್ಯರೇ

**ವಿಷಯ: ಪ್ರತಿ ವಿಷಯ/ಪತ್ರಿಕೆಯಲ್ಲಿ ಎರಡು ಅಸೈನ್‌ಮೆಂಟ್‌ಗಳನ್ನು ಸಲ್ಲಿಸುವ ಕುರಿತು.**

ಕಳೆದ ಶೈಕ್ಷಣಿಕ ವರ್ಷದಂತೆ ಈ ಬಾರಿಯೂ ತಾವು ಅಧ್ಯಯನ ಮಾಡುತ್ತಿರುವ ವಿಷಯ/ಪತ್ರಿಕೆಯಲ್ಲಿ ಎರಡು ಅಸೈನ್‌ಮೆಂಟ್‌ಗಳನ್ನು ಸಲ್ಲಿಸಬೇಕಾಗುತ್ತದೆ.

ಆದ್ದರಿಂದ ಈ ಪತ್ರದೊಂದಿಗೆ ತಮ್ಮ ಕೋರ್ಸಿಗೆ ಸಂಬಂಧಿಸಿದ ಅಸೈನ್‌ಮೆಂಟ್ ವಿಷಯಗಳ ಪಟ್ಟಿಯನ್ನು ಲಗತ್ತಿಸಲಾಗಿದೆ. ಪ್ರತಿಯೊಂದು ವಿಷಯ/ಪತ್ರಿಕೆಯಲ್ಲಿ ತಾವು ಎರಡು ಅಸೈನ್‌ಮೆಂಟ್‌ಗಳನ್ನು ಸಲ್ಲಿಸಬೇಕಾಗಿದ್ದು ಅಸೈನ್‌ಮೆಂಟ್ ಒಂದಕ್ಕೆ ತಲಾ ಹತ್ತು ಅಂಕಗಳನ್ನು ಮೀಸಲಾಗಿಡಲಾಗಿದೆ.

ಅಸೈನ್‌ಮೆಂಟ್‌ಗಳ ಕಾರ್ಯವನ್ನು ಕೈಗೆತ್ತಿಕೊಳ್ಳುವ ಮೊದಲು ಈ ಕೆಳಗಿನ ಅಂಶಗಳನ್ನು ತಪ್ಪದೇ ಗಮನಿಸುವುದು.

1. ಬರವಣಿಗೆಯು ನಿಖರವೂ ತರ್ಕಬದ್ಧವೂ ಆಗಿರಬೇಕು.
2. ಸರಳವಾದ ಶುದ್ಧ ಕನ್ನಡದಲ್ಲಿರಬೇಕು.
3. ಸ್ಪಷ್ಟವಾಗಿ ಓದಲು ಯೋಗ್ಯ ಬರಹದಲ್ಲಿರಬೇಕು.

ಅಸೈನ್‌ಮೆಂಟ್‌ಗಳನ್ನು ನಿಗದಿತ ದಿನಾಂಕದೊಳಗೆ ಸಲ್ಲಿಸುವುದು ಕಡ್ಡಾಯವಾಗಿದೆ. ತಾವು ಕಳುಹಿಸುವ ಅಸೈನ್‌ಮೆಂಟ್‌ಗಳ ಪ್ರತಿಗಳನ್ನು ತಮ್ಮ ಬಳಿಯೂ ಇಟ್ಟುಕೊಳ್ಳತಕ್ಕದ್ದು.

**ಸೂಚನೆಗಳು:**

1. ವಿದ್ಯಾರ್ಥಿಗಳು ಪ್ರತಿ ವಿಷಯದಲ್ಲಿ/ಪತ್ರಿಕೆಯಲ್ಲಿ ಎರಡು ಅಸೈನ್‌ಮೆಂಟ್‌ಗಳನ್ನು ಸಲ್ಲಿಸತಕ್ಕದ್ದು. ಇದು ಕಡ್ಡಾಯವಾಗಿರುತ್ತದೆ.
2. ಅಸೈನ್‌ಮೆಂಟ್‌ಗಳಿಗೆ 20 ಅಂಕಗಳು ಹಾಗೂ ವಾರ್ಷಿಕ ಪರೀಕ್ಷೆಗಳಿಗೆ 80 ಅಂಕಗಳನ್ನು ನಿಗದಿಪಡಿಸಲಾಗಿದೆ.
3. ವಿದ್ಯಾರ್ಥಿಗಳು ವಾರ್ಷಿಕ ಪರೀಕ್ಷೆಗಳಿಗೆ ಹಾಜರಿ/ಗೈರುಹಾಜರಿಯಾಗುವುದನ್ನು ಪರಿಗಣಿಸದೆ ಅಸೈನ್‌ಮೆಂಟ್‌ಗಳನ್ನು ಪ್ರಸಕ್ತ ಶೈಕ್ಷಣಿಕ ವರ್ಷದಲ್ಲಿಯೇ ಸಲ್ಲಿಸತಕ್ಕದ್ದು.
4. ವಿದ್ಯಾರ್ಥಿಗಳು ಪ್ರತಿ ಅಸೈನ್‌ಮೆಂಟ್‌ನಲ್ಲಿ ಕನಿಷ್ಠ ಅಂಕಗಳನ್ನು ಪಡೆದ ನಂತರ ಮತ್ತೆ ಉತ್ತಮೀಕರಣಕ್ಕೆ ಅವಕಾಶವಿರುವುದಿಲ್ಲ ಮತ್ತು ಈ ಅಂಕಗಳನ್ನೇ ಮರುಪರೀಕ್ಷೆ ತೆಗೆದುಕೊಂಡ ಸಂದರ್ಭಗಳಲ್ಲಿಯೂ ಉಳಿಸಿಕೊಳ್ಳಲಾಗುವುದು.
5. ನಿಗದಿತ ದಿನಾಂಕದೊಳಗೆ ಅಸೈನ್‌ಮೆಂಟ್‌ಗಳನ್ನು ಸಲ್ಲಿಸದ ವಿದ್ಯಾರ್ಥಿಗಳು ವಾರ್ಷಿಕ ಪರೀಕ್ಷೆಗೆ ಹಾಜರಾಗಬಹುದು. ಆದರೆ ಅಂಕಪಟ್ಟಿಯಲ್ಲಿ ಈ ಬಗ್ಗೆ ಅಗತ್ಯ ಷರಾ ದಾಖಲಿಸಲಾಗುವುದು.
6. ಕನ್ನಡ ಮಾಧ್ಯಮದಲ್ಲಿ ಉತ್ತರಿಸುವ ವಿದ್ಯಾರ್ಥಿಗಳು ಇಂಗ್ಲೀಷ್ ಭಾಷೆಯಲ್ಲಿರುವ ವಿಷಯಗಳನ್ನು ಸ್ವತಃ ಮನದಟ್ಟುಮಾಡಿಕೊಂಡು ಕನ್ನಡದಲ್ಲಿಯೇ ಉತ್ತರಿಸಬಹುದಾಗಿದೆ.
7. ಅಸೈನ್‌ಮೆಂಟ್‌ಗಳನ್ನು ಬರೆಯಲು ಬಿಳಿ ಹಾಳೆಯನ್ನು ಬಳಸತಕ್ಕದ್ದು. ಪ್ರತಿ ವಿಷಯ/ಪತ್ರಿಕೆಯ ಪ್ರತಿಯೊಂದು ಅಸೈನ್‌ಮೆಂಟ್‌ಗಳನ್ನು ಉತ್ತರಿಸಲು ಪ್ರತ್ಯೇಕ ಹಾಳೆಯನ್ನು ಉಪಯೋಗಿಸುವುದು.
8. ವಿದ್ಯಾರ್ಥಿಗಳು ಅಸೈನ್‌ಮೆಂಟ್‌ಗಳನ್ನು ತಮ್ಮ ಸ್ವಂತ ಕೈಬರಹದಲ್ಲಿ ನೀಲಿ ಶಾಯಿಯ ಪೆನ್ನು ಉಪಯೋಗಿಸಿಕೊಂಡು ಬರೆಯತಕ್ಕದ್ದು.
9. ವಿದ್ಯಾರ್ಥಿಗಳು ಲಗತ್ತಿಸಲಾದ ನಮೂನೆಯನ್ನು ಅಗತ್ಯ ವಿವರಗಳೊಂದಿಗೆ ಭರ್ತಿಮಾಡಿ ಪ್ರತಿ ವಿಷಯದ ಅಸೈನ್‌ಮೆಂಟ್‌ಗೆ ಪ್ರತ್ಯೇಕವಾಗಿ ಲಗತ್ತಿಸತಕ್ಕದ್ದು.
10. ವಿದ್ಯಾರ್ಥಿಗಳು ಎಲ್ಲಾ ಅಸೈನ್‌ಮೆಂಟ್‌ಗಳನ್ನು ದಿನಾಂಕ **01.06.2022(ಬುಧವಾರ)** ರಿಂದ **15.07.2022ರ (ಶುಕ್ರವಾರ)** ಅವಧಿಯಲ್ಲಿ ಸಲ್ಲಿಸತಕ್ಕದ್ದು. ಆ ಬಳಿಕ ವಿದ್ಯಾರ್ಥಿಗಳು ದಿನವೊಂದಕ್ಕೆ ರೂ.300-00ರಂತೆ ದಂಡ ಪಾವತಿಸಿ ದಿನಾಂಕ **30.07.2022ರ(ಶನಿವಾರ)** ವರೆಗೆ ಅಸೈನ್‌ಮೆಂಟ್‌ಗಳನ್ನು ಸಲ್ಲಿಸಬಹುದಾಗಿದೆ. **ಆದರೆ ದಿನಾಂಕ 01.08.2022ರ ಬಳಿಕ ಸ್ವೀಕೃತವಾಗುವ ಅಸೈನ್‌ಮೆಂಟ್‌ಗಳನ್ನು ಯಾವುದೇ ಸಂದರ್ಭದಲ್ಲಿ ಪರಿಗಣಿಸಲಾಗುವುದಿಲ್ಲ.**
11. ಅಸೈನ್‌ಮೆಂಟ್‌ಗಳನ್ನು **ನಿರ್ದೇಶಕರು, ದೂರ ಶಿಕ್ಷಣ ಕೇಂದ್ರ, ಮಂಗಳೂರು ವಿಶ್ವವಿದ್ಯಾನಿಲಯ, ವಾಣಿಜ್ಯ ಸಂಕೀರ್ಣ, ಮಂಗಳಗಂಗೋತ್ರಿ -574 199** ಇವರಿಗೆ ಸಲ್ಲಿಸತಕ್ಕದ್ದು.

ತಮ್ಮ ವಿಶ್ವಾಸಿ,

ನಿರ್ದೇಶಕರು

**ವಿಶೇಷ ಸೂಚನೆ**: ಅಧ್ಯಾಪಕರು ಶಿಫಾರಸು ಮಾಡಿರುವ ಸಂಬಂಧಪಟ್ಟ ಪುಸ್ತಕಗಳನ್ನು ಓದಿ ಅಸೈನ್‌ಮೆಂಟ್‌ಗಳನ್ನು ಬರೆಯುವುದು.